ಅಧ್ಯಕ್ಷರು: ಕುಲಕರ್ಣಿಯವರೆ, ನೀವು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದೀರಿ ಇಲ್ಲಿ ವಿವರಗಳಿಗೆ ಅವಕಾಶವಿಲ್ಲ. ಮೆನ್‌ಷನ್ ಮಾಡಿ. ಅವರು ಉತ್ತರ ಹೇಳುತ್ತಾರೆ.

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಅಲ್ಲಿ ಏನು ಚರ್ಚೆಯಾಗಿದೆ ಆ ಬಗ್ಗೆ.

ಅಧ್ಯಕ್ಷರು: ಚರ್ಚೆಯಾಗಿದೆ ಎಂದರೆ ಬೇರೆ ರೂಪದಲ್ಲಿ ತನ್ನಿ. ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ನೀವೂ ಎಲ್ಲವನ್ನೂ ಹೇಳಲಿಕ್ಕೆ ಅವಕಾಶವಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಸರ್ಕಾರ ಅದನ್ನು ಸರಿಪಡಿಸಿದರೆ ಇಡೀ ರಾಜ್ಯದ ಜನತೆಗೆ ನೆಮ್ಮದಿ ಸಿಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಈಗೇನು ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು ಪ್ರಸ್ತಾಪಿಸಿದ್ದಾರೆ, ಇದರ ಬಗ್ಗೆ ನಮ್ಮ ಜಲಸಂಪನ್ಮೂಲ ಸಚಿವರು ಅದಕ್ಕೆ ಪ್ರತ್ಯೇಕವಾಗಿ ಉತ್ತರ ಕೊಡುತ್ತಾರೆ. ನಾನು ಅವರ ಗಮನಕ್ಕೆ ತರುತ್ತೇನೆ.

ಈ) ವಿಷಯ: ತುಮಕೂರು ಜಿಲ್ಲೆ ಗೋಪಾಲಪುರದಲ್ಲಿ ಹೊನ್ನಮ್ಮ ಎನ್ನುವ ದಲಿತ ಮಹಿಳೆಯ ಮೇಲೆ ಸುಮಾರು 40 ಜನರ ಗುಂಪು ಕಲ್ಲಿನಿಂದ ಜಜ್ಜಿ ಸಾಯಿಸಿರುವ ಘಟನೆ ಬಗ್ಗೆ.

ಡಾ: ಹೆಚ್ ಸಿ ಮಹಾದೇವಪ್ಪ: ಸೋಮವಾರದ ದಿವಸ ತುಮಕೂರು ಜಿಲ್ಲೆ ಗೋಪಾಲಪುರದಲ್ಲಿ ಹೊನ್ನಮ್ಮ ಎನ್ನುವ ದಲಿತ ಮಹಿಳೆಯ ಮೇಲೆ ಸುಮಾರು ನಲವತ್ತು ಜನರ ಗುಂಪು ಕಲ್ಲಿನಿಂದ ಜಜ್ಜಿ ಸಾಯಿಸಿರತಕ್ಕಂಥ ಘಟನೆ ನಿನ್ನೇ ಇಂಡಿಯನ್ ಎಕ್ಸ್‌ಪ್ರೆಸ್‌ನ ಮುಖಪುಟದಲ್ಲಿ ಬಂದಿದೆ, ಇವತ್ತು ಪ್ರಜಾವಾಣಿಯ ಎಡಿಟೋರಿಯಲ್‌ನಲ್ಲಿ ಬರೆದಿದ್ದಾರೆ. ಹೊನ್ನಮ್ಮ ಒಬ್ಬ ಸ್ವಾಭಿಮಾನಿ ದಲಿತ ಮಹಿಳೆ. ಹೋರಾಟದಲ್ಲಿದ್ದಂಥವಳು. ರಾಜಕೀಯ ಪಕ್ಷದಲ್ಲಿದ್ದು ಯಾರಿಗೂ ತಲೆಬಾಗದೇ ಸ್ವಾಭಿಮಾನದಿಂದ ತನ್ನಲ್ಲಿರತಕ್ಕಂಥ ಸ್ವತಂತ್ರದ ಸಂರಕ್ಷಣೆಯ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದಳು. ಅವಳ ಮೇಲೆ ಕಳ್ಳತನದ ಕೇಸ್ ಹಾಕಿ ಪೊಲೀಸರು ಅರೆಸ್ಟ್ ಮಾಡಿ, ಅವಳು ಬೇಲ್‌ನಿಂದ

ರಿಲೀಜ್ ಆಗಿ ಬಂದು ತನ್ನ ಹೋರಾಟ ಮುಂದುವರಿಸಿಕೊಂಡು ಬಂದ ಸಂದರ್ಭದಲ್ಲಿ ಕಳೆದ ಪಂಚಾಯತ್ ಚುನಾವಣೆಯಲ್ಲಿ ನಿಂತು ಸೋತಿದ್ದಳು.

1–10 ಪಿ.ಎಂ.

ಸೋಮವಾರದ ದಿವಸ 40 ಜನರ ಗುಂಪು ಆಕೆಯನ್ನು ಸುತ್ತುವರಿದು ಕಲ್ಲಿನಿಂದ ಜಜ್ಜಿ ಡ್ರೈನೇಜ್‌ಗೆ ಬಿಸಾಕಿದರು. ಡ್ರೈನೇಜ್‌ಗೆ ಬಿಸಾಕಿದ ನಂತರ ಆಕೆ ಸಾಯದೇ ನೀರು ನೀರು ಎಂದು ಕೂಗುತ್ತಾ ಒದ್ದಾಡುತ್ತಿದ್ದಳು. "Women begs for water before being stoned to death" ಆಕೆ ನೀರು ನೀರು ಎಂದು ಒದ್ದಾಡುತ್ತಾ ಕೂಗುತ್ತಿದ್ದಾಗ ಆಕೆ ಇನ್ನು ಸತ್ತಿಲ್ಲವೆಂದು ಆಕೆಯನ್ನು ಡ್ರೈನೇಜ್‌ನಿಂದ ಈಚೆಗೆ ತೆಗೆದು ಮತ್ತೆ ಕಲ್ಲಿನಿಂದ ಜಜ್ಜಿ ಸಾಯಿಸಿ ಅದೇ ಡ್ರೈನೇಜ್‌ಗೆ ಹಾಕಿರುವಂಥ ಘಟನೆ ತುಮಕೂರು ಜಿಲ್ಲೆಯ ಗೋಪಾಲಪುರದಲ್ಲಿ ನಡೆದಿದೆ. ಆ ಜಿಲ್ಲೆಯಲ್ಲಿ ಇದರ ಬಗ್ಗೆ ದಲಿತ ಸಂಘಟನೆಗಳು ಹೋರಾಟ ಮಾಡಿದ ಮೇಲೆ ಪೊಲೀಸರು 10 ಜನರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಆದರೆ, ಈ ಘಟನೆಗೆ ಸಂಬಂಧಪಟ್ಟಂಥ ಪ್ರಮುಖವಾದ ವ್ಯಕ್ತಿಗಳ ಮೇಲೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಇದೊಂದು ಅಮಾನುಷ ಕೃತ್ಯ ಮತ್ತೇ ಇದರಲ್ಲಿ ಪೊಲೀಸರು ಸಂಪೂರ್ಣವಾಗಿ ವೈಫಲ್ಯರಾಗಿದ್ದಾರೆ. ಸತ್ತಿರುವ ಹೊನ್ನಮ್ಮ ಬಿಜೆಪಿ ಪಕ್ಷದ ಕಾರ್ಯಕರ್ತೆಯಾಗಿದ್ದರು. ಈ ರಾಜ್ಯದಲ್ಲಿ ದಲಿತರಿಗೆ ಸರ್ಕಾರ ರಕ್ಷಣೆ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥದ್ದು ಇಂಥ ಘಟನೆಯಿಂದ ಮನವರಿಕೆಯಾಗಿದೆ. ಇವತ್ತಿನ ದಿವಸ ದಲಿತರು ಮೊದಲೇ ಶೋಷಣೆಗೆ ಒಳಗಾದವರಾಗಿದ್ದಾರೆ. ಅದರಲ್ಲಿಯೂ ಈ ಮಹಿಳೆ ದಲಿತ ಮಹಿಳೆಯಾಗಿದ್ದಾಳೆ. ಆಕೆಯನ್ನು ಕಲ್ಲಿನಿಂದ ಜಜ್ಜಿ ಡ್ರೈನೇಜ್‌ಗೆ ಬಿಸಾಕಿ ಆಕೆ ಇನ್ನೇನು ಸತ್ತು ಹೋಗುತ್ತಾಳೆಂದು ತಿಳಿದು ಮುಂದೆ ಹೋಗುತ್ತಿದ್ದವರು ಆಕೆ ನೀರು ಎಂದು ಮಾತನಾಡಿದ ಶಬ್ದ ಕೇಳಿ ಮತ್ತೇ ವಾಪಸ್ಸು ಬಂದು ಕಲ್ಲಿನಿಂದ ಜಜ್ಜಿ ಸಾಯಿಸಿದ್ದಾರೆ. ಇದು ನಿಜವಾಗಿಯೂ ವಿಚಿತ್ರವಾದ ಘಟನೆ ಮತ್ತು ರಾಕ್ಷಸಿ ಪ್ರವೃತಿಯಾದಂಥ ಘಟನೆಯಾಗಿದೆ. ಆದ್ದರಿಂದ, ಸರ್ಕಾರ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಇದರಲ್ಲಿ ಯಾರೇ ಭಾಗಿಯಾಗಿದ್ದರೂ ಸಹ ಅವರ

ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕು. ಮತ್ತೇ ಈ ದಲಿತ ಮಹಿಳೆ ಸಾವಿನ ಮುಖಾಂತರ ತನ್ನ ಧೈರ್ಯವನ್ನು ಪ್ರದರ್ಶನ ಮಾಡಿ ಸಾವನ್ನಪ್ಪಿದ್ದಾಳೆ. ಆದ್ದರಿಂದ, ಆಕೆಯ ಕುಟುಂಬಕ್ಕೆ ಅರ್ಥಿಕ ನೆರವನ್ನು ಕೊಡಬೇಕು ಮತ್ತೆ ಈ ಘಟನೆ ಬಗ್ಗೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ವಿವರಿಸಬೇಕು. ಹಾಗೆಯೇ ಈ ಘಟನೆ ಏಕೆ ನಡೆಯಿತ್ತೆಂಬದರ ಬಗ್ಗೆ ತನಿಖೆಯನ್ನು ನಡೆಸಬೇಕು. ಯಾವುದೇ ಜಿಲ್ಲೆಯಲ್ಲಿ ದಲಿತರ ಮೇಲೆ ದೌರ್ಜನ್ಯ ಪ್ರಕರಣ ನಡೆದರೆ ಸರ್ಕಾರ ಎಸ್‌ಪಿ ಮತ್ತು ಡಿಸಿ ಯವರನ್ನು ಹೊಣೆಗಾರನ್ನಾಗಿ ಮಾಡಲಾಗುತ್ತಿತ್ತು. ಆದರೆ, ಇವತ್ತಿನ ದಿವಸ ಹೇಳುವವರು, ಕೇಳುವವರು, ಕೇಳುವವರು ಯಾರು ಇಲ್ಲ. ಹೊನ್ನಮ್ಮ ಎಂಬುವರು ಬಿಜೆಪಿ ಪಕ್ಷದ ಕಾರ್ಯಕರ್ತೆಯಾಗಿದ್ದಳು. ನಾಚಿಕೆಯಿಂದ ತಲೆತಗ್ಗಿಸುವಂಥ ಘಟನೆ ಇದಾಗಿದೆ. ಈ ಘಟನೆ ನಡೆದರೂ ಕೂಡ ಸಂಬಂಧಪಟ್ಟವರ ಮೇಲೆ ಇನ್ನು ಕ್ರಮ ತೆಗೆದುಕೊಂಡಿಲ್ಲವೆಂದರೆ ಹೇಗೆ? ಇದು ನಿಜವಾಗಿಯೂ ಕೂಡ ಹೇಯವಾದಂಥ ಘಟನೆಯಾಗಿದ್ದು, ಇದನ್ನು ನಾನು ಖಂಡಿಸುತ್ತೇನೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ದಲಿತ ಮಹಿಳೆಯರಿಗೆ ರಕ್ಷಣೆ ಇಲ್ಲವೆಂದರೆ ಬದುಕುವುದಾದರು ಹೇಗೆ? ಮತ್ತೇ ಸರ್ಕಾರವಾದರೂ ಏಕೆ ಇರಬೇಕು? ದಯಮಾಡಿ ಈ ಘಟನೆಯನ್ನು ಸೀರಿಯಸ್ ಆಗಿ ತೆಗೆದುಕೊಂಡು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಹಾಗೆಯೇ ಆಕೆಯ ಕುಟುಂಬಕ್ಕೆ ಪರಿಹಾರ ಘೋಷಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ಘಟನೆ ಬಗ್ಗೆ ಇವತ್ತಿನ ದಿವಸದ ಎಲ್ಲಾ ಪತ್ರಿಕೆಯ ಮುಖಪುಟದಲ್ಲಿ ಬಂದಿದೆ.

ಅಧ್ಯಕ್ಷರು: ಇದು ಶೂನ್ಯವೇಳೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆ ಆಗಿದೆ. ಆದರೆ, ಇದರ ಬಗ್ಗೆ ಸರ್ಕಾರ ಇನ್ನು ಉತ್ತರ ಕೊಟ್ಟಿಲ್ಲದೆ ಇರುವುದರಿಂದ ಈ ವಿಷಯದ ಬಗ್ಗೆ ನಾನೂ ಕೂಡ ಪ್ರಸ್ತಾಪ ಮಾಡುತ್ತಿದ್ದೇನೆ. ಸರ್ಕಾರ ಇದರ ಬಗ್ಗೆ ಉತ್ತರ ಕೊಡುವಾಗ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಹೇಳುವುದಕ್ಕೆ

ಬಯಸುತ್ತೇನೆ. ಏಕೆಂದರೆ, ನನ್ನ ಹಳೆಯ ಕ್ಷೇತ್ರದ ಪಕ್ಕದ ಊರಿನಲ್ಲಿ ಈ ಘಟನೆಯಾಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಯಾವ ರೀತಿಯ ವಾತಾವರಣ ಇದೆ ಎಂಬುದು ನನಗೆ ಗೊತ್ತಿದೆ. ನನಗೆ ಬಂದಿರುವ ಸ್ವಲ್ಪ ಮಾಹಿತಿಯ ಹಿನ್ನಲೆಯಲ್ಲಿ ಹೇಳುವುದಾದರೆ, ರಾಜಕೀಯ ವೈಷಮ್ಯದ ಹಿನ್ನಲೆಯಲ್ಲಿ ಈ ಘಟನೆಯಾಗಿದೆ. ಸತ್ತಿರುವ ಮಹಿಳೆ ಯಾವ ಪಾರ್ಟಿ ಎಂಬುದು ಬೇರೆ ಪ್ರಶ್ನೆ ಇರಬಹುದು. ರಾಜಕೀಯ ವೈಷಮ್ಯದಲ್ಲಿಯೂ ಕೂಡ ಸ್ವಾಭಿಮಾನದಿಂದ ಬದುಕಿದಂಥ ಒಬ್ಬ ಹೆಣ್ಣು ಮಗಳಿಗೆ ಇಷ್ಟೊಂದು ಅಮಾನುಷವಾಗಿ ಕೋಲ್ಲುವುದಕ್ಕೆ ಪ್ರಯತ್ನಪಟ್ಟಿದ್ದಾರೆಂದು ತಿಳಿದು ಬಂದಿದೆ. ಹೋರಾಟಕ್ಕೆಂದು ಹೋರಕ್ಕೆ ಬಂದವರನ್ನು ಅರೆಸ್ಟ್ ಮಾಡಿರುವಂಥ ಕೆಲಸ ಇವತ್ತಾಗಿದೆ. ಆದ್ದರಿಂದ, ನಾನು ಹೇಳುವುದೆನೇಂದರೆ, ಆ ಇಲಾಖೆಯ ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ರವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ರೀತಿಯಲ್ಲಿ ಕ್ರಮ ತೆಗೆದುಕೊಂಡು ವಿಧಾನಸಭೆಯ ಮುಂದೆ ಬಂದು ಉತ್ತರ ಹೇಳಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ. ಏಕೆಂದರೆ, ತಾವು ಉತ್ತರ ಕೊಡುವಾಗ ಸ್ಪಷ್ಟವಾಗಿ ಅಂದರೆ, ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಒಂದು ಒಳ್ಳೆಯ ಮೆಸೆಜ್ ಇಡೀ ಜಿಲ್ಲೆಗೆ ಹೋಗಬೇಕಾಗುತ್ತದೆ. ಏಕೆಂದರೆ, ಇಂಥ ಪ್ರಕರಣಗಳು ಸಂಭವಿಸಿದ ಹಿನ್ನಲೆಯಲ್ಲಿ ಮುಂದೆ ಇಂಥ ಕೆಲಸಗಳನ್ನು ಮಾಡಲು ಎಲ್ಲರೂ ಹೆದರಿಕೊಳ್ಳುವಂತಾಗುವ ಒಂದು ಕಾರ್ಯಕ್ರಮ ಆಗಬೇಕಾಗುತ್ತದೆ. ದಯಾಮಾಡಿ ಈ ರೀತಿಯಾಗಿ ಒಂದು ಕಾರ್ಯಕ್ರಮ ಆಗಬೇಕೆಂದು ನಾನು ಈ ಸಂರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವಪ್ಪನವರು ಮತ್ತು ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿರುವ ವಿಷಯ ಬಹಳ ಗಂಭೀರವಾಗಿದೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರ ಗಮನಕ್ಕೆ ತಂದು ಈ ಘಟನೆ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದು ಮತ್ತು ಇನ್ನು ಏನು ಕ್ರಮ ತೆಗೆದುಕೊಳ್ಳಲಾಗುತ್ತದೆಂಬ ಬಗ್ಗೆ ಮಾನ್ಯ ಗೃಹ ಸಚಿವರಿಂದ ತಕ್ಷಣ ಉತ್ತರ ಕೊಡಿಸುತ್ತೇನೆ.

DR.H.C.MAHADEVAPPA:- It should be seriously viewed and compensation should be immediately given.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ಘಟನೆಗೆ ಕಾರಣಕರ್ತರಾಗಿರುವ ಅಧಿಕಾರಿಗಳ ಮೇಲೆ ಮತ್ತು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಬಹಳ ಹೀನಾಯವಾಗಿ ಮತ್ತು ಅಮಾನುಷವಾಗಿ ಆಕೆಯನ್ನು ಸಾಯಿಸಿದ್ದಾರೆ. ಇಷ್ಟು ಹೊತ್ತಿಗಾಗಲೇ ಅಲ್ಲಿರುವ ಡಿವೈಎಸ್‌ಪಿ ಮತ್ತು ಇತರೇ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಗೃಹ ಸಚಿವರಿಂದಲೇ ಇದರ ಬಗ್ಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ನಾಳೆ ದಿವಸ ಮಾನ್ಯ ಗೃಹ ಸಚಿವರು ಹೇಳಿಕೆ ಕೊಡುವಾಗ ಅಲ್ಲಿರುವ ಅಧಿಕಾರಿಗಳು ಸಸ್ಪೆಂಡ್ ಆಗಿರಬೇಕು.

ಶ್ರೀ ಜಗದೀಶ್ ಶೆಟ್ಟರ್: ಇದು ಅತ್ಯಂತ ಗಂಭೀರವಾದಂಥ ವಿಷಯವಾಗಿರುವುದರಿಂದಲೇ ಇದರ ಬಗ್ಗೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾನ್ಯ ಗೃಹ ಸಚಿವರಿಂದಲೇ ಉತ್ತರ ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ದಲಿತರ ಮೇಲೆ ಮತ್ತು ಮಹಿಳೆಯರ ಮೇಲೆ ದೌರ್ಜನ್ಯವಾದಾಗ ಆ ಜಿಲ್ಲೆಯಲ್ಲಿರುವಂಥ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾಧಿಕಾರಿ ನೇರವಾಗಿ ಹೊಣೆಗಾರರಾಗುತ್ತಾರೆ. ಸರ್ಕಾರದಿಂದ ಅವರುಗಳನ್ನು ಹೊಣೆಗಾರರನ್ನಾಗಿ ಮಾಡಿರುವ ಸುತ್ತೋಲೆಯನ್ನು ಬಹಳ ವರ್ಷಗಳ ಹಿಂದೆಯೇ ಕೊಟ್ಟಿದ್ದೇವೆ. ಇದೇನು ನೆನ್ನೆಮೊನ್ನೆ ಕೊಟ್ಟಿರುವಂಥದ್ದಲ್ಲ. ಏಕೆಂದರೆ, ಈ ರೀತಿಯ ದೌರ್ಜನ್ಯ ದಲಿತರ ಮೇಲೆ ಆಗಬಾರದೆಂಬ ಉದ್ದೇಶದಿಂದ ಕೊಡಲಾಗಿದೆ. ಆದರೆ, ಈ ಘಟನೆ ನೋಡಿದರೆ ಈ ಕೃತ್ಯ ಬಹಳ ಅಮಾನುಷವಾಗಿದೆ. ಕುಡಿಯುವುದಕ್ಕೆ ನೀರು ಕೊಡಿ ಎಂದು ಕೇಳಿದಾಗ ಮನ: ಬಂದು ನೀರು ಕೊಡದೇ ಆಕೆಯನ್ನು ಕಲ್ಲಿನಿಂದ ಮತ್ತೆ ಹೊಡೆದು ಸಾಯಿಸಿದ್ದಾರೆ. ಈ ತರಹ ಆಗಿರುವಂಥ ಅಮಾನುಷವಾದ ಘಟನೆ ಬಗ್ಗೆ ನೋಡುತ್ತೇವೆ, ಮಾಡುತ್ತೇವೆ, ವಿಚಾರ ಮಾಡುತ್ತೇವೆಂದು ಸರ್ಕಾರದ

ಕಡೆಯಿಂದ ಆಗಬಾರದು. ಈ ಘಟನೆ ಮೊನ್ನೆದಿವಸ ಆಗಿದ್ದು, ಇಷ್ಟು ಹೊತ್ತಿಗಾಗಲೇ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಎಸ್‌ಪಿ ಮತ್ತು ಡಿಸಿ ಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಎಎಸ್‌ಐ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ. ಎಎಸ್‌ಐ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಯೇ? ಸುತ್ತೋಲೆಯಲ್ಲಿರುವ ಪ್ರಕಾರ ಇದಕ್ಕೆ ಆತ ಜವಾಬ್ದಾರಿಯಾಗುತ್ತಾನೆಯೇ? ಸಂಘಟನೆಗಳು ಹೋರಾಟ ಮಾಡಿದ ಮೇಲೆ ಕ್ರಮ ತೆಗೆದುದೊಂಡಿದ್ದಾರೆ. ರಾಜ್ಯದಲ್ಲಿ ಈ ರೀತಿಯಾಗಿ ಆಗಬಾರದು. ಈ ಸರ್ಕಾರದಲ್ಲಿ ದಲಿತರಿಗೆ ರಕ್ಷಣೆ ಸಿಗುತ್ತಿಲ್ಲವೆಂದು ಬಿಜೆಪಿ ಪಾರ್ಟಿಯ ಲೀಡರ್ ಆಗಿರುವ ಮಾನ್ಯ ರಮೇಶ್ ಜಿಗಜಿಗಣಿಯವರು ಈ ಒಂದು ಕಾರಣಕ್ಕಾಗಿಯೇ ಹೇಳಿದ್ದಾರೆ. ಮಾನ್ಯ ಗೃಹ ಸಚಿವರು ಉತ್ತರ ಕೊಡುವಾಗ ಇದರಲ್ಲಿ ಯಾರ್‍ಯಾರು ಜವಾಬ್ದಾರಿಯಾಗಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಂಡು ಉತ್ತರ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಗೃಹ ಸಚಿವರ ಮುಖಾಂತರ ಈ ವಿಷಯದ ಬಗ್ಗೆ ಸ್ಟೇಟ್‌ಮೆಂಟ್ ಮಾಡಿಸುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ: ಆಕೆಯ ಕುಟುಂಬಕ್ಕೆ ಪರಿಹಾರ ಕೂಡ ಕೊಡಿಸಬೇಕು.

ಶ್ರೀ ಜಗದೀಶ್ ಶೆಟ್ಟರ್: ಆ ವಿಷಯದ ಬಗ್ಗೆ ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತೇನೆ.

5. ನಿಯಮ 69ರ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪ ಕಲಾವಾಧಿ ಚರ್ಚೆ:

ವಿಷಯ:– ಸನ್ಮಾನ್ಯ ಲೋಕಾಯುಕ್ತರು ಭ್ರಷ್ಟಚಾರ ತಡೆಯುವ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಹಲವು ವರದಿಗಳನ್ನು ಸಲ್ಲಿಸಿದ್ದಾರೆ. ರಾಜ್ಯದ ನೈಸರ್ಗಿಕ, ಜನತೆಯ ಹಾಗೂ ಗಣಿ ಸಂಪತ್ತು ಅಕ್ರಮವಾಗಿ ಲೂಟಿಯಾಗುತ್ತಿದೆ. ನೆರೆ ಸಂತ್ರಸ್ತರಿಗೆ ಪರಿಹಾರ ನೀಡುವಲ್ಲಿ ಆಗಿರುವ ಅವ್ಯವಹಾರ ಮತ್ತು ತಾರತಮ್ಯದ ಬಗ್ಗೆ ತನಿಖೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಭ್ರಷ್ಟಾಚಾರ ತಡೆಯಲು ಸರ್ಕಾರದಿಂದ ಸಹಕಾರ ಸಿಗುತ್ತಿಲ್ಲವೆಂದು